# ರಾಘವೇಂದ್ರ ಪಾಟೀಲರ ‘ತೇರು’ ಕಾದಂಬರಿಯ ಮೌಲ್ಯಯುತ ವಿವೇಚನೆ

**ವೆಂಕಟೇಶ ಪಿ.**

ಸಂಶೋಧನಾ ವಿದ್ಯಾರ್ಥಿ, ಮೈಸೂರು ವಿಶ್ವವಿದ್ಯಾನಿಲಯ, ಸ್ನಾತಕೋತ್ತರ ಕೇಂದ್ರ ಹೇಮಗಂಗೋತ್ರಿ, ಹಾಸನ.

DOI: https://doi.org/10.5281/zenodo.15581066

## ABSTRACT:

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಾದ ರಾಘವೇಂದ್ರ ಪಾಟೀಲರು ಅಪ್ಪಟ ಗ್ರಾಮೀಣ ಪ್ರತಿಭೆ. ಗ್ರಾಮ ಬದುಕಿನ ಅನನ್ಯ ಅನುಭವಗಳಿಗೆ ಸಾಹಿತ್ಯದ ಆಧುನಿಕ ಚಿಂತನಾ ಮಾರ್ಗಗಳನ್ನು ಬೆಸೆದವರು. ಇವರು ವೃತ್ತಿಯಿಂದ ಪ್ರಾಣಿಶಾಸ್ತ್ರ ಪ್ರಾಧ್ಯಾಪಕರಾಗಿದ್ದರೂ ತಮ್ಮ ಮೂಲ ಸಾಹಿತ್ಯಿಕ ಪ್ರವೃತ್ತಿಯನ್ನು ಉಳಿಸಿ ಬೆಳೆಸಿಕೊಂಡು ಬಂದು ಅದರಲ್ಲಿ ಅತ್ಯುಚ್ಚ ಸಾಧನೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಕಾವ್ಯ ರಚನೆಯ ಕ್ಷೇತ್ರದಲ್ಲಿ ಕೈ ಆಡಿಸಿದರೂ, ಕಥೆ-ಕಾದಂಬರಿಗಳ ಕ್ಷೇತ್ರವನ್ನು ಆಪ್ತವಾಗಿ ಅಪ್ಪಿಕೊಂಡ ಅವರು ಕನ್ನಡ ನಾಡಿನ ಪ್ರಮುಖ ಕಥೆಗಾರರಾಗಿ, ಕಾದಂಬರಿಕಾರರಾಗಿ ಮನ್ನಣೆಯನ್ನು ಪಡೆದುಕೊಂಡಿದ್ದಾರೆ. ವಸ್ತು ವೈವಿಧ್ಯ ಮತ್ತು ಭಾಷಿಕ ವೈಶಿಷ್ಯಗಳಿಂದ ಒಂದು ರೀತಿಯ ಅನನ್ಯತೆಯನ್ನು ಮೆರೆದಿದ್ದಾರೆ. ಪಾಟೀಲರ ಸೃಜನಶೀಲ ಸಂವೇದನೆಯ ಮುಪ್ಪುರಿಗೊಂಡು ವಿಶಿಷ್ಟ ರೀತಿಯಲ್ಲಿ ‘ತೇರು’ ಕಾದಂಬರಿಯ ಮೂಲಕ ಒಡಮೂಡಿದ್ದು ಕನ್ನಡ ಸಾಹಿತ್ಯದ ಚಲನಶೀಲತೆಗೆ ಹೊಸ ಆಯಾಮವನ್ನು ತಂದುಕೊಟ್ಟಿತು. ಈ ‘ತೇರು’ ಕಾದಂಬರಿಯಲ್ಲಿ ರಾಘವೇಂದ್ರ ಪಾಟೀಲ ಅವರ ಸೂಕ್ಷ್ಮ ಅವಲೋಕನ, ವಸ್ತು ನಿಷ್ಠದೃಷ್ಟಿಯ ಪ್ರತೀಕಗಳು, ಮೌಲ್ಯಯುತ ವಿವೇಚಗಳು ಬಹುಸ್ತರಗಳಲ್ಲಿ ಹೇಗೆ ಬಿತ್ತರಗೊಂಡಿವೆ ಎಂಬುದನ್ನು ತಿಳಿಯುವುದು ಅತ್ಯವಶ್ಯಕ.

## KEYWORDS:

ತೇರು, ದ್ಯಾವಪ್ಪ, ಧರಮನಟ್ಟಿ, ವಿಠ್ಠಲಸ್ವಾಮಿ, ರಗುತ, ತಿಲಕ, ರಂಗೋ ಪಟವರ್ಧನ್, ಬಲಿ, ಧಾರ್ಮಿಕ ಸಂಕಥನ, ದೇಸಗತಿ.

### ತೇರು ಕಾದಂಬರಿಯ ವಸ್ತು ವಿವೇಚನೆ:

ಇತಿಹಾಸ ಮತ್ತು ಪುರಾಣದ ನಡುವಿನ ತೆಳುಗೆರೆಯ ಮೇಲೆ ಮೂಡುವ ಜಾನಪದ ಕತೆಯಂತೆ ಭಾಷೆ, ಭಾವ, ಶೈಲಿ, ಸೊಗಡುಗಳಲ್ಲಿ ಆವರಿಸಿಕೊಂಡು ಓದಿಸಿಕೊಳ್ಳುವ ‘ತೇರು’ ಒಂದು ಕಥಾನಕ ಕೃತಿ. ತೇರು ಕಾದಂಬರಿ ಅನ್ನುವುದಕ್ಕಿಂತಲೂ ನೀಳ್ಗತೆ ಅನ್ನಬಹುದಾಗಿದ್ದು, ನವ್ಯೋತ್ತರ ಕಾಲಘಟ್ಟದಲ್ಲಿ ರಚನೆಯಾಗಿರುವಂತಹ ಮೇರು ಕೃತಿ. ನವ್ಯೋತ್ತರ ಕಥನ ಸಾಹಿತ್ಯವು ಸಮಷ್ಟಿ ಚಿಂತನೆ, ಅಂತಃಶಿಸ್ತೀಯ

ಸಾಮಾಜಿಕ ಗ್ರಹಿಕೆ, ಭ್ರಮೆ-ವಾಸ್ತವಗಳ ಮಿಶ್ರಣ ಇತ್ಯಾದಿಗಳ ದಿಕ್ಕಿನಲ್ಲಿ ಶೋಧಿಸುವಂತಹದ್ದು. ಈ ನಿಟ್ಟಿನಲ್ಲಿ ರಾಘವೇಂದ್ರ ಪಾಟೀಲರ 'ತೇರು' ಹೆಚ್ಚು ಅರ್ಥಪೂರ್ಣವಾಗಿ ಕಂಡುರುತ್ತದೆ.

ಕನ್ನಡದ ಜುವಾರಿ ಕತೆಗಾರ ಎಂದೇ ಸಂಬೋಧಿಸಲ್ಪಟ್ಟಿರುವ ರಾಘವೇಂದ್ರ ಪಾಟೀಲರ 'ತೇರು' ಮುಖ್ಯವಾಗಿ ಸ್ಥಿತ್ಯಂತರವನ್ನು ಕುರಿತ ಕಾದಂಬರಿ. ''ಕಾಲ ಕಾಲಕ್ಕೆ ಸಂಭವಿಸುವ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಪಲ್ಲಟಗಳು ಮನುಷ್ಯ ಜೀವಿತದ ಗುಣಾತ್ಮಕತೆಯ ಮೇಲೆ ಬೀರುವ ಅಪರಿಹಾರ್ಯವೆನಿಸುವ ಪ್ರಭಾವಗಳನ್ನು ರೂಪಾತ್ಮಕ ನೆಲೆಯಲ್ಲಿ ಕಟ್ಟಿಕೊಡುವುದು ತೇರು ಕಾದಂಬರಿಯ ವೈಶಿಷ್ಟ್ಯ. ಮಾನವ ಜೀವಿತವೇ ಈ ಪಲ್ಲಟಗಳನ್ನು ಗ್ರಹಿಸುವ ಗ್ರಾಹಕ ಸಾಮಾಗ್ರಿಯಾಗುತ್ತದೆ. ಮೂರು ತಲೆಮಾರಿನ ಅಳತೆಗೋಲಲ್ಲಿ ಪುರಾಣ-ಇತಿಹಾಸ-ವರ್ತಮಾನಗಳನ್ನು ಅನುಸಂಧಾನ ಮಾಡುತ್ತಾ ತೇರು ತನ್ನನ್ನು ತಾನೇ ಕಟ್ಟಿಕೊಳ್ಳುತ್ತದೆ'' ಎಂದು ಡಾ. ಎಚ್.ಎಸ್. ವೆಂಕಟೇಶಮೂರ್ತಿ ಅವರು ತೇರು ಕಾದಂಬರಿಯನ್ನು ಕುರಿತು ಆಡೊರಿವ ಆಡಿರುವ ಮಾತು ಆ ಕಾದಂಬರಿಗಿರುವ ಘನತೆಯನ್ನು ಎತ್ತಿ ಹಿಡಿಯುತ್ತದೆ.

'ತೇರು' ಎನ್ನುವ ಶೀರ್ಷಿಕೆಯ ಜೊತೆಗೆ 'ಆಧುನಿಕ ಪುರಾಣ' ಎಂಬ ಉಪಶೀರ್ಷಿಕೆಯನ್ನು ಯಶವಂತ ಚಿತ್ತಾಲರದಿಂದ ಗಳಿಸಿಕೊಂಡ ಈ ಕಥೆಗೆ ಪುರಾಣದಂತ ಕಥಾವಲಯವಿದೆ. ಧರಮನಟ್ಟಿ ಎನ್ನುವ ಪುಟ್ಟ ಊರಿನ ಸುತ್ತ ಹಬ್ಬಿಕೊಳ್ಳುವ ಈ ಕಥೆಗೆ ನೂರೈವತ್ತು ವರುಷಗಳ ಕಾಲದ ಹರವೂ ಇದೆ. ಒಂದು ದೇಸಗತಿಯ-ಸಣ್ಣ ಸಾಮ್ರಾಜ್ಯವೊಂದರ-ವೈಭವೋಪೇತ ಆರಂಭದ ಸಂದರ್ಭ ಹಾಗೂ ಪ್ರಸ್ತುತ ಗದ್ದಲದ ರಾಜಕಾರಣದ ವಾತಾವರಣ ಈ ಕಿರು ಕಾದಂಬರಿಯಲ್ಲಿ ಮುಖಾಮುಖಿಯಾಗುತ್ತವೆ.

ಧರಮನಟ್ಟಿ ಎಂಬ ದೇಸಗತಿಯನ್ನು ಹುಟ್ಟುಹಾಕಿದ ರಂಗೋಪಟವರ್ಧನ ದೇಸಾಯಿಯು ತನ್ನ ಮನೆ ದೇವರಾದ ವಿಠ್ಠಲನ ಒಂದು ಭವ್ಯ ದೇವಾಲಯವನ್ನು ಕಟ್ಟಿಸುತ್ತಾನೆ. ಹೊನ್ನ ಕಳಸದ, ಬೃಹತ್ ಕಲ್ಲಿನ ಚಕ್ರಗಳ, ಆ ದೇವಾಲಯದ ತೇರು ಇಡೀ ದೇಸಗತಿಯ ಪ್ರತಿಷ್ಠೆಯ ಸಂಕೇತ. ಆದರೆ ಮೊದಲನೆಯ ರಥೋತ್ಸವದ ಸಂದರ್ಭದಲ್ಲಿಯೇ ಆ ತೇರು ನೂರಾರು ಜನರು ಪ್ರಯತ್ನಿಸಿದರೂ ಚಲಿಸುವುದಿಲ್ಲ; ಮತ್ತು ಶಾಸ್ತ್ರದ ಅಯ್ಯನವರು ನರಬಲಿ ಆಗಬೇಕೆಂದು ಹೇಳುತ್ತಾರೆ. ಕೊನೆಗೆ, 'ಕೆಳ' ಜಾತಿಯ ಸೂತ್ರದ ಗೊಂಬೀರಾಮರ ಬಡ ದ್ಯಾವಪ್ಪ ಎಂಬುವವನ ಮಗವನ್ನು ಬಲಿ ಕೊಟ್ಟ ನಂತರ ತೇರು ಚಲಿಸುತ್ತದೆ. ಈ ತ್ಯಾಗಕ್ಕಾಗಿ ದ್ಯಾವಪ್ಪನಿಗೆ ದೇಸಾಯಿಯಿಂದ ಕಳ್ಳೀಗುದ್ದಿ ಎಂಬ ಊರಿನಲ್ಲಿ ಎಂಟೆಕೆರೆ ಜಮೀನು ಇನಾಮಾಗಿ ದೊರೆಯುತ್ತದೆ; ಮತ್ತು ಅಂದಿನಿಂದ ಪ್ರತಿ ವರ್ಷ ದ್ಯಾವಪ್ಪ ಅಥವಾ ಅವನ ವಂಶದವರು ರಥೋತ್ಸವದ ದಿನ ರಥದ ಚಕ್ರಕ್ಕೆ ಹಣೆ ಒಡೆದುಕೊಂಡು ಮಾಡುವ 'ರಕ್ತ ತಿಲಕ'ದ ಸೇವೆಯ

ಆಚರಣೆ ಪ್ರಾರಂಭವಾಗುತ್ತದೆ. ಆದರೆ ಕಾಲಕ್ರಮದಲ್ಲಿ ಜನರಿಗೆ ದೇವರಲ್ಲಿ ಮತ್ತು ರಥೋತ್ಸವದಲ್ಲಿಯೇ ನಂಬಿಕೆ ಕಮ್ಮಿಯಾಗುತ್ತದೆ; ಇನಾಮಿನ ಜಮೀನನ್ನು ಮೋಸದಿಂದ ಆ ಊರಿನ ಗೌಡ ತನ್ನದಾಗಿಸಿಕೊಳ್ಳುತ್ತಾನೆ. ಆಧುನಿಕ ಕಾಲದ ದ್ಯಾವಪ್ಪನ ವಂಶಸ್ಥ (ಅವನ ಹೆಸರೂ ದ್ಯಾವಪ್ಪ ಎಂತಲೇ) ರಕ್ತತಿಲಕದ ಸೇವೆಯನ್ನು ತ್ಯಜಿಸಿ, ಕೆಲಕಾಲ ಜೆ.ಪಿ. ಆಂದೋಳನದಲ್ಲಿ ಭಾಗವಹಿಸಿ ಜೈಲಿಗೆ ಹೋಗಿ, ಅನಂತರ ಬಾಬಾ ಆಮ್ಟೆ ಅವರ ಸೇವಾಶ್ರಮವನ್ನು ಸೇರುತ್ತಾನೆ.

'ತೇರು' ಕಾದಂಬರಿಯಲ್ಲಿ ನಾಲ್ಕಾರು ತಲೆಮಾರುಗಳ ಉಲ್ಲೇಖ ಬರುತ್ತದೆ. ಮೊದಲನೇ ತಲೆಮಾರಿನ ನಾಯಕ ದ್ಯಾವಪ್ಪ-ಧರಮನಟ್ಟಿಯ ವೈಭವದ ಕಾಲದಲ್ಲಿ ವಿಠ್ಠಲ ದೇವರ ತೇರಿಗೆ ತನ್ನ ನಡುವಿನ ಮಗ ಚಂದ್ರಾಮನನ್ನು ಬಲಿಕೊಟ್ಟ ಬಡವ ಆತ. ಈ ಬಲಿ ಪ್ರಸಂಗವನ್ನು ಅತ್ಯಂತ ಸುಂದರವಾಗಿ 'ಗೊಂದಲಿಗರ ಕಥನ ಶೈಲಿ'ಯ ಮೂಲಕ ಹೇಳಲಾಗಿದೆ. ಎಂಟೆಕೆರೆ ಭೂಮಿಗೆ ಮಗನನ್ನು ಬಲಿ ಕೊಟ್ಟ ಗೊಂಬೀರಾಮರ ದ್ಯಾವಪ್ಪ ಕಾಲಾಂತರದಲ್ಲಿ ಒಂದು ಪುರಾಣವಾಗಿ ಬಿಡುತ್ತಾನೆ. ಕಾದಂಬರಿಯಲ್ಲಿ ಮುಂದೆ ಬರುವ ಒಂದು ವಿವರಣೆಯು ಆತ ಪುರಾಣವಾದ ಬಗೆಗೆ ಅತ್ಯಂತ ಹೃದ್ಯಯವಾದ ಒಂದು ವಿವರಣೆಯನ್ನು ನೀಡುತ್ತದೆ. ಅದು ಹೀಗಿದೆ

''...ಮಗನ್ನ ಸ್ವಾಮಿಯ ರಥಕ್ಕ ಬಲೀ ಕೊಟ್ಟ ಆ ದ್ಯಾವಪ್ಪ ಅಗದೀ ಥೇಟ್ ವಿಠ್ಠಲಸ್ವಾಮಿ ಇದ್ದಂಗ಼ ಇದ್ದನಂತ! ... ನಮ್ಮ ಹರ್‌ಯಾರು ಹೇಳತಿದ್ದರು ... ತೇರಿಗ ಬಲೀ ಕೊಡಾಕಾಂತ ಅಂವ ತನ್ನ ಮಗನ್ನ ತೆಕ್ಯಾಗ ಅವಚಿ ಹಿಡಕೊಂಡು-ತೇರಿನ ಗಾಲಿಯ ತೆಳಗ ಇಳದ ಬಂದು ... ದ್ಯಾವಪ್ಪನ ತೆಕ್ಯಾಗಿನ ಚಂದ್ರಾಮ ಅನ್ನುವ ಆ ಹುಡುಗನ್ನ ತನ್ನ ತೆಕ್ಕಿಗೆ ತಗೊಂಡನಂತ ... ತನ್ನ ರಥಕ್ಕ ಬಲೀ ಆಗಲಿಕ್ಕೆ ಬಂದ ಆ ಕಂದನ್ನ ತನ್ನ ತೆಕ್ಯಾಗ ಇಟಗೊಂಡು ವಿಠ್ಠಲ ಸ್ವಾಮಿ ಗರುಡ ಪಕ್ಷೀ ಮ್ಯಾಲ ಕುಂತಗೊಂಡು ... ಅಂತರಿಕ್ಷಾಕ್ಕ ಹಾರಿದನಂತ .... ಅಂತರಿಕ್ಷಕ್ಕೆ ಹಾರಿ ... ಹಂಗ಼ ಹಿರಿಹೊಳೀ ದಾಟಿ ... ಆಕಾಸದಾಗೇ ಪಂಢರಾಪುರದ ಹಾದೀ ಹಿಡಿದನಂತ ...'' (ಪು.ಸಂ. 95).

ಚಾರಿತ್ರಿಕ ಘಟನೆಯೊಂದು ಕಾಲಾಂತರದಲ್ಲಿ ಐತಿಹ್ಯವಾಗಿ ಕೊನೆಗೆ ಪುರಾಣವಾದ ಸಂದರ್ಭವಿದು. ದ್ಯಾವಪ್ಪನ ತೀರ್ಥಯಾತ್ರೆ ಮತ್ತಿತರ ವಿವರಗಳು ಇದಕ್ಕೆ ಪೂರಕವಾದ ವಿಚಾರಗಳಾಗಿವೆ. ಕಾದಂಬರಿಯಲ್ಲಿ ಕಂಡುಬರುವ ಧಾರ್ಮಿಕ ಸಂಕಥನವು ತಮ್ಮ ಉಳಿವಿಗಾಗಿ ಮತ್ತು ಪ್ರತಿಷ್ಠೆಗಾಗಿ ಒಂದು ಬಗೆಯ ಹಿಂಸೆಯನ್ನು ವೈಭವೀಕರಿಸುವುದಲ್ಲದೇ ಅದನ್ನು ಅನಿವಾರ್ಯವಾಗಿಸುತ್ತವೆ. ಇಂತಹ ಧಾರ್ಮಿಕ ಸಂಕಥನಗಳ ಆಧಾರವಾದ ಸಾಮೂಹಿಕ ನಂಬಿಕೆ-ಆಚರಣೆಗಳ ಬಲಿ ದಲಿತರು ಅಥವಾ ಸ್ತ್ರೀಯರಾಗಿರುತ್ತಾರೆ. ಹಾಗಾಗಿ ರಂಗೋ ಪಟವರ್ಧನ್ ಕಟ್ಟಿಸಿದ ತೇರು ಚಲಿಸದೆ ಅದಕ್ಕೆ ನರಬಲಿ ಕೊಡಬೇಕೆಂದು ತೀರ್ಮಾನಿಸಿದಾಗ ದೇಸಾಯರು,

ಕಾರಭಾರಿಗಳು, ಡಂಣಾಕಯರು ಇತ್ಯಾದಿ ಅಧಿಕಾರಸ್ಥರೆಲ್ಲರೂ ಒಂದಲ್ಲ ಒಂದು ಕಾರಣ ಹೇಳಿ ತಾವು, ತಮ್ಮ ಮನೆಯವರು ಬಲಿಯಾಗುವ ಆಪತ್ತಿನಿಂದ ತಪ್ಪಿಸಿಕೊಳ್ಳುತ್ತಾರೆ. ಕೊನೆಗೆ ಅಧಿಕಾರದಲ್ಲಿರುವವರೆಲ್ಲರೂ ''ಸ್ವಾಮಿಗೆ ಬೇಕಂತ ನರಮನುಷ ಬಲಿಯು, ಕಾಟುಕರ ಜಾತೀಯ ಮನುಸಾ ಬೇಕಲ್ಲೋ'' ಎಂದು ನಿರ್ಧರಿಸುತ್ತಾರೆ. ಬಲಿಯಾಗುವವರಲ್ಲಿ ''ಹೆಣ್ಣು ಗಂಡೆಂಬುವ ಭೇದ ಇಲ್ಲ ... ಸಣ್ಣವರು, ದೊಡ್ಡವರು ಅಂಬುವ ವಯಸ್ಸಿನ ನಿರ್ಬಂಧ ಇಲ್ಲ .... ಫಕ್ತ ಉತ್ತಮರ ಕುಲದವರು ಮಾತ್ರ ಮ್ಯಾಡ, ಉತ್ತಮರ ಕುಲದವರನ್ನು ಬಿಟ್ಟು ಯಾವುದಾದರೂ ಕಾಟುಕರ ಕುಲದ ಒಂದು ಇಸಮನ್ನು ಹಿಡಿದು ತೇರಿನ ಬಲಿಗೆ ತರಬೇಕು''. ಅಂತೆಯೇ ಕೊನೆಗೆ ಸೂತ್ರದ ಗೊಂಬೆ ಆಟದಿಂದ ಹೊಟ್ಟೆ ಹೊರೆಯುವ, ಒಂಭತ್ತು ಮತ್ತು ಬಸುರಿ ಹೆಂಡತಿ ಇರುವ, ಬಡ ದ್ಯಾವಪ್ಪ ತನ್ನ ನಡುಕಲ ಮಗನನ್ನು 'ದೇವರ ಕೆಲಸ'ಕ್ಕೆ ಕೊಡಲು ಒಪ್ಪುತ್ತಾನೆ.

ದೇವರ/ಧರ್ಮದ ವಿರುದ್ಧ ಇಂದಿನ ಕಾಲದ ದ್ಯಾವಪ್ಪ ಬಂಡಾಯ ಹೂಡುವುದು ಈ ಕಾರಣಕ್ಕಾಗಿಯೇ. ಮೂರು ತಲೆಮಾರುಗಳ ನಂತರದ ದ್ಯಾವಪ್ಪನ ಮರಿ ಮೊಮ್ಮಗ ಕುಬೇರಪ್ಪನ ಮಗನಾದ ಈ ದ್ಯಾವಪ್ಪ ಧರ್ಮದ, ದೇವರ ಹೆಸರಿನಲ್ಲಿ ದುರ್ಬಲ ವರ್ಗದವರ ಮೇಲೆ ನಡೆಸುವ ದೌರ್ಜನ್ಯದ ವಿರುದ್ಧ ಬಂಡಾಯವೇಳುತ್ತಾನೆ. ಪರಂಪರೆಯೊಡನೆ ತೀವ್ರ ಸಂಘರ್ಷಕ್ಕಿಳಿದು ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋಗಿ ಬರುತ್ತಾನೆ. ಜೈಲಿನಿಂದ ಬಂದ ಒಮ್ಮೆ ದ್ಯಾವಪ್ಪ ಹೀಗೆ ಹೇಳುತ್ತಾನೆ.

''... ನಮ್ಮದು ಪುಣ್ಯಭೂಮಿ ... ನಮ್ಮ ಪೂರ್ವಜರೆಲ್ಲಾ ಅವತಾರೀ ಪುರುಷರೂ ... ಹಂಗs ... ಹಿಂಗs ಅಂತ .... ತಲೀ ಚಿಟ್ಟ ಹಿಡಿದ ಹೋತರೀ ... ಹಿಂದಿಂದ ತಗೊಂಡು ಹಿತ್ತಲದಾಗ ಅತ್ತರಂತ! .... ಅಲ್ಲರೀ ನಮ್ಮ ವ್ಯವಸ್ಥದಾಗ ಬಡವರು ಮರ್ಯಾದದಿಂದ ಬದುಕೂ ಹಾದೀ ಹೇಳರಿ ... ಹಳ್ಯಾಗಿನ ಗೌಡರೂ–ಕುಲಕರ್ಣ್ಯಾರು–ಜಮೀನುದಾರರು ಮತ್ತು ಜಾತ್ಯಸ್ಥರೂ ಮಾಡತಿರೂ ಹಂತಾ ದಂಡವರ್ತೀ ಬಗ್ಗೆ ವಿಚಾರ ಮಾಡರಿ ... ನಮ್ಮಂಥಾ ಹುಡುಗೋರಿಗೆ ಕೆಲಸ ಇಲ್ಲದರ ಬಗ್ಗೆ ಹೇಳರೀ ...'' (ಪು.ಸಂ. 68).

ದ್ಯಾವಪ್ಪನ ಕಳಕಳಿಯ ಈ ಮಾತುಗಳು ಎಲ್ಲಾ ಧಾರ್ಮಿಕ ಸಂಕಥನಗಳಿಗೂ ಅನ್ವಯಿಸುತ್ತದೆ. ಏಕೆಂದರೆ ಎಲ್ಲಾ 'ತೇರು'ಗಳೂ ಹರಿಯುವುದು ದಲಿತರ, ದುರ್ಬಲರ, ಸ್ತ್ರೀಯರ ದೇಹಗಳ ಮೇಲೆಯೇ. ಬಡತನದ ಬವಣೆಯ ಕಾರಣಕ್ಕಾಗಿ ತನ್ನ ಕರುಳ ಕುಡಿಯನ್ನೇ ಬಲಿಕೊಟ್ಟ ದ್ಯಾವಪ್ಪನ ಅಸಹಾಯಕ ಸ್ಥಿತಿ ದುರಂತವೆನಿಸಿದರೆ ಪ್ರಭುತ್ವಶಾಹಿ ವ್ಯವಸ್ಥೆಯು ದುರ್ಬಲ ಜನತೆಯ ಮೇಲೆ ನಡೆಸುವ ದೌರ್ಜನ್ಯವು ಅಮಾನವೀಯವಾಗಿದೆ. ಅಧಿಕಾರಿಶಾಹಿಗಳ ಈ ದರ್ಪ ಇಲ್ಲಿಗೆ ಮುಗಿಯುವುದಿಲ್ಲ. ತೇರಿಗೆ ನರಬಲಿಯಾದ ನಂತರವೂ ಅಧಿಕಾರದ ಸಮರ್ಥನೆಯನ್ನು ಕಂಡುಕೊಂಡ

'ಪ್ರಭುಗಳು' ಅದನ್ನೊಂದು ವಾರ್ಷಿಕ ಆಚರಣೆಯನ್ನಾಗಿಸಿ ಅದರ ನೆನಪನ್ನು ಜೀವಂತವಾಗಿಡುತ್ತಾರೆ. ಹಾಗೆಯೇ ಆ ಘಟನೆಯಿಂದ ನೊಂದವರೂ ಕೂಡಾ ಅದನ್ನು ಅದನ್ನು ವೈಭವೀಕರಿಸಿ ಅದರ ನೆನಪನ್ನು ಜೋಪಾನಿಸುತ್ತಾರೆ. ಅದಕ್ಕಾಗಿ ದ್ಯಾವಪ್ಪನ ವಂಶಸ್ಥರು ಭೂಮಿಯ ಮೇಲೆ ಧರಮನಟ್ಟಿಯ ದೇಸಗತಿಯ ತೇರು ಇರುವ ತನಕ ಪ್ರತಿ ವರ್ಷದ ರಥೋತ್ಸವ ಸಂಭ್ರಮದಲ್ಲಿ ತೇರಿನ ಗಾಲಿಗೆ ತಮ್ಮ ತಲೆಯನ್ನು ಒಡದು 'ರಗತ ತಿಲಕದ ಸೇವೆ'ಯನ್ನು ನಡೆಸಿಕೊಂಡು ಬರಲು ಒಪ್ಪುತ್ತಾರೆ.

ಒಂದು ಕಾಲಘಟ್ಟದಲ್ಲಿ ಮೂಲ ಪುರುಷ ದ್ಯಾವಪ್ಪ ರಗತ ತಿಲಕದ ಸೇವೆಯನ್ನು ಕುರಿತು ''ನೋಡೂ ... ದೈವ ಹಿಂತಾ ಸೇವಾ ಮಾಡೂದನ್ನ ನಮ್ಮ ಮನಿತನಕ್ಕ ಕೊಟ್ಟೈತಿ'' ಎಂದು ಅಖಂಡ ವಿಶ್ವಾಸದಿಂದ ಹೇಳುವಂತೆಯೇ ಅವನ ವಂಶಕ್ಕೆ ಸೇರಿದ ಮತ್ತೊಬ್ಬ ಆಧುನಿಕ ದ್ಯಾವಪ್ಪ ಶಿಕ್ಷಣ ಪಡೆದು ವಿಚಾರವಂತನಾಗಿದ್ದು, ಇಂದಿನ ಸಮಾಜದ ವ್ಯವಸ್ಥೆಯ ಅಸಮಾನ ನೆಲೆಗಳನ್ನು ಕಂಡು ರೋಸಿ ಹೋಗಿ, ದೇವರ, ಧರ್ಮದ ಹೆಸರಿನಲ್ಲಿ ನಡೆಯುವ ದೌರ್ಜನ್ಯವನ್ನು ಪ್ರತಿಭಟಿಸುತ್ತಾನೆ. ''ನಾ ಎರಡ ವರ್ಷ ಅಗದೀ ನಿಷ್ಠಾದಿಂದ – ಅಗದೀ ಭಕ್ತೀಲಿಂದ ಯಾತ್ರಾ ಮಾಡಿದಿನರಿ ... ಅದರ ಯಾವ ಒಂದ ದೇವಸ್ಥಾನದೊಳಗನೂ – ಒಂದು ಕ್ಷೇತ್ರದಾಗಾದರೂ ದೇವರಿದ್ದಾನಂತ ಅನ್ನೂ ಭಾವನಾ ನನಗ ಬರಲಿಲ್ಲ ನೋಡ್ರಿ ... ಗುಡೀ ಅನ್ನುವುದರೊಳಗ ದೇವರುಗಳೆಲ್ಲಾ ಕಲ್ಲಮೂರತಿ ಆಗಿ ಕುಂತೀವರೀ ಸಾಹೇಬರ್ರ ...! (ಪು. ಸಂ. 75–66) ಎಂದು ಪರಂಪರಾಗತ ಶ್ರದ್ಧಾ ಸ್ವರೂಪದ ವಿರುದ್ಧ ಸಂಘರ್ಷಕ್ಕಿಳಿಯುತ್ತಾನೆ.

ಮೂಲ ದ್ಯಾವಪ್ಪ ರಕ್ತ ತಿಲಕದ ಆಚರಣೆಯನ್ನು ಶೋಷಣೆಯಂತೆ ಕಾಣದೆ ಅದನ್ನು ಸೇವೆಯೆಂದು ಪರಿಗಣಿಸಿ ಅದಕ್ಕಾಗಿ ತನ್ನ ರಕ್ತಶುದ್ಧಿಯನ್ನು ಮಾಡಿಕೊಂಡು ಒಂದು ತಿಂಗಳ ಮೊದಲೇ ಮನೆಯಿಂದ ಹೊರಟು, ಸುತ್ತಮುತ್ತಲಿನ ಎಲ್ಲಾ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ಕೊನೆಗೆ ತೇರಿನ ಸೇವೆ ಮಾಡಿ ತನ್ನನ್ನು ಕೃತಕೃತ್ಯದಿಂದ ಭಾವಿಸುತ್ತಾನೆ. ಆದರೆ ಇಂತಹ ಸಾಧ್ಯತೆ ಇಂದು ದೂರವಾಗಿದೆ. ಆಧುನಿಕ ದ್ಯಾವಪ್ಪ ಹೇಳುವಂತೆ ''ದೇವರೂ ದಿಂಡರೂ ಎಲ್ಲಾ ಔಟ್ ಆಫ್ ಡೇಟ್ ಆಗ್ಯಾವರೀ .... ಗೂಗೀಕೊಳ್ಳದಾಗ ಈಗ ಯಾವ ಸಿದ್ಧರೂ ಕಾಣೂದಿಲ್ಲ. ಅಲ್ಲಿ ಈಗ ಕಳ್ಳರು ಅಡಗಿಕೊಂಡಿರತಾರರಿ ...'' ಎಂದು ಬದಲಾದ ಸಾಮಾಜಿಕ-ರಾಜಕೀಯ ಪರಿಸ್ಥಿತಿಯಲ್ಲಿ ತನ್ನನ್ನು ಸಂಪೂರ್ಣವಾಗಿ ನೊಂದವರ ಸೇವೆಗಾಗಿ, ಕುಷ್ಠ ರೋಗಿಗಳ ಸೇವೆಗಾಗಿ ಅರ್ಪಿಸಿಕೊಂಡಿದ್ದಾನೆ. ಪರಂಪರೆಯೊಡನೆ ತೀವ್ರ ಸಂಘರ್ಷಕ್ಕಿಳಿದಿರುವ ಈ ದ್ಯಾವಪ್ಪನು ಹೊಸ ಹಾದಿಯನ್ನು ಕಂಡುಕೊಂಡು 'ನವ ನಿರ್ಮಾಣ ಚಳುವಳಿ', 'ಜೈಲು', 'ಬದಲಾವಣೆ' ಮತ್ತಿತರ ಪದಗಳ ನಡುವೆ ಬದುಕುತ್ತಾನೆ.

ಪಾಟೀಲರು ಸೃಜಿಸಿರುವ ಈ ಕಾದಂಬರಿಯಲ್ಲಿ ಅನೇಕ ಮೌಲಿಕ ಅಂಶಗಳಿವೆ. ವೈಚಾರಿಕ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಧಾರ್ಮಿಕ ಸಂಕಥನಗಳ ವಿಚಾರಗಳ ಗೊಂಚಲಗಳು ವಿಭಿನ್ನವಾಗಿ ಮೈದಾಳಿ ನಿಂತಿವೆ. ಕೃತಿಯಲ್ಲಿ ಅನೇಕ ನಿರೂಪಕರಿದ್ದಾರೆ. ಅನೇಕ ಶೈಲಿಯ ಧಾಟಿಯ ನಿರೂಪಣೆಗಳಿವೆ. ಕೃತಿಯ ಒಟ್ಟಾರೆ ನಿರೂಪಕ ಬೆಂಗಳೂರಿನಲ್ಲಿರುವ ಪಾಟೀಲನೆಂಬ ಪತ್ರಕರ್ತ. ತನ್ನ ತಿರುಗಾಟದಲ್ಲಿ ಅವನು ಭೇಟಿ ಮಾಡುವ ಸ್ವಾಂವಜ್ಜನೆಂಬ ಮುದುಕ ಇಡೀ ಧರಮನಟ್ಟಿಯ ಪೂರ್ವೇತಿಹಾಸವನ್ನು ತನ್ನ ಒಡಲಲ್ಲಿ ಒತ್ತುಕೊಂಡಿರುವಂತಹ ಸಾಕಾರಮೂರ್ತಿ. ಈ ಸ್ವಾಂವಜ್ಜ ಜೈನ ಧರ್ಮದವನಾಗಿದ್ದರೂ ಧರಮನಟ್ಟಿಯ ವೈದಿಕ ಸಂಪ್ರದಾಯದ ಪರಂಪರೆಯ ಉಳಿವಿಗಾಗಿ ನಿರಂತರ ಶ್ರಮಿಸುತ್ತಾ ಸ್ವಧರ್ಮಕ್ಕಿಂತ ಇಚ್ಛಾ ಧರ್ಮವೇ ಮೇಲೆಂದು ಭಾವಿಸುವ ಸಾಮರಸ್ಯದ ವ್ಯಕ್ತಿತ್ವವುಳ್ಳವನು. ಹಾಗಾಗಿ ಈತನು ಕೂಡ ಕತೆಯ ಕೇಂದ್ರಬಿಂದುವಾಗಿ ಗುರುತಿಸಿಕೊಳ್ಳುತ್ತಾನೆ. ಅಲ್ಲದೇ ಆಧುನಿಕ ದ್ಯಾವಪ್ಪನ ಬದುಕಿನಲ್ಲಿ ಪ್ರವೇಶವಾಗುವ ಮುದುಕಿಯ ವಿಧವೆ ಸೊಸೆಯಾದ ಬಾಳವ್ವ ಎಂಬ ಪಾತ್ರ ಪಾಟೀಲರ ಬರವಣಿಗೆಯಲ್ಲಿ ವಿಶೇಷವಾಗಿ ಮೂಡಿಬಂದಿದೆ.

ಬಾಳವ್ವ ವಿಧವೆಯಾಗಿದ್ದರೂ ಗಂಡಿನ ಆಸರೆಯಿಲ್ಲದೆ ತನ್ನ ಮುದುಕಿ ಅತ್ತೆಯೊಂದಿಗೆ ಮಕ್ಕಳನ್ನು ಸಾಕಿಕೊಂಡು ಸ್ವಾರ್ಥದ ಸಮಾಜದಲ್ಲಿ ಕುಟುಂಬ ನಿರ್ವಹಣೆ ಮಾಡಿಕೊಂಡು ಬದುಕು ನಡೆಸುವುದು ಕಷ್ಟ ಸಾಧ್ಯ. ಕಾಮುಕ ದೃಷ್ಟಿಯ ನರಮಾನವರೊಂದಿಗೆ ಒಂದು ಅಸಹಾಯಕ ಸ್ಥಿತಿಯ ಹೆಣ್ಣು ಮಗಳೊಬ್ಬಳು ಪುರುಷ ಸಮಾಜದಲ್ಲಿ ಜೀವಿಸುವುದು ನಿರಂತರ ಹೋರಾಟವೇ ಸರಿ. ಇಂತಹ ಹೆಣ್ಣು ಮಗಳಿಗೆ, ಅವಳ ಮಕ್ಕಳಿಗೆ, ಅವಳ ಮುದುಕಿ ಅತ್ತೆಗೆ ಆಸರೆಯಾಗಿ ನಿಲ್ಲುವ ಆಧುನಿಕ ದ್ಯಾವಪ್ಪ ಉತ್ತಮ ಪುರುಷ ಸಮಾಜಕ್ಕೆ ಮಾದರಿ ವ್ಯಕ್ತಿತ್ವದವನಾಗಿ ನಿಲ್ಲುತ್ತಾನೆ. ಕಾಯ ವಾಚ ಮನಸ ಯಾವುದೇ ಸ್ವಾರ್ಥವಿಲ್ಲದೇ ದೈಹಿಕ ಸುಖಕ್ಕೂ ಆಸೆ ಪಡದೆ ವಿಧವೆ ಸ್ತ್ರೀಗೆ ಬಾಳನ್ನು ನೀಡಲು ನಿರ್ಧರಿಸುವ ದ್ಯಾವಪ್ಪ ತನ್ನ ಗುಣದಲ್ಲಿ ನಿರ್ಮಲನೆನೆಸಿಕೊಳ್ಳುತ್ತಾನೆ. ಮದುವೆ ಆಗದ ಹೊರತು ಹೆಣ್ಣೊಂದಿಗೆ ಸೇರಬಾರದೆಂಬ ಆತನ ಮನೋಭಾವ ಅಚಲವಾದದ್ದು. ಹಾಗಾಗಿ ಬಾಳವ್ವನಿಗೆ ದ್ಯಾವಪ್ಪನೆಂದರೆ ಅತಿಯಾದ ನಂಬಿಕೆ, ವಿಶ್ವಾಸ, ದೃಢ ಒಲುಮೆಯಿದೆ. ಆದರೆ ಅನಿವಾರ್ಯ ಸ್ಥಿತಿಗೆ ಒಳಗಾಗುವ ದ್ಯಾವಪ್ಪ ತನ್ನ ವೈಯಕ್ತಿಕ ಹಿತಾಸಕ್ತಿಗೆ ಬೆಲೆ ಕೊಡದೆ ಬಾಬಾ ಅಮ್ಟೆ ಅವರಂತಹ ವಿಚಾರ ಚಿಂತನೆಗೆ ಒಳಗಾಗಿ ಬಡವರು–ನಿರ್ಗತಿಕರು, ಕುಷ್ಠ ರೋಗಿಗಳ ಸೇವೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು ಸೇವಾಶ್ರಮದಲ್ಲಿ ನೆಲೆಗೊಳ್ಳುತ್ತಾನೆ. ಹೀಗಾಗಿ ದ್ಯಾವಪ್ಪನೊಂದಿಗೆ ಹೊಸ ಜೀವನ ನಡೆಸಬೇಕೆಂಬ ಕನಸ ಹೊತ್ತಿದ್ದ ಬಾಳವ್ವನಿಗೆ ಆಘಾತವಾಗುತ್ತದೆ. ಸ್ವಾರ್ಥವೇ ತುಂಬಿರುವ ಜನಗಳ ನಡುವೆ ಯಾವುದೇ ಸ್ವಾರ್ಥವಿಲ್ಲದೇ ನಿಸ್ವಾರ್ಥದಿಂದ ಬಾಳವ್ವನಿಗೆ ಒಳಿತನ್ನು ಬಯಸುತ್ತಾ ತಾನು

ತೆಗೆದುಕೊಂಡಿರುವ ನಿರ್ಧಾರಕ್ಕೆ ಬದ್ಧನಾಗಿ ಅವಳ ಕುಟುಂಬ ನಿರ್ವಹಣೆಗೆ ಪ್ರತಿ ತಿಂಗಳು ಹಣ ಕಳುಹಿಸುವ ವ್ಯವಸ್ಥೆ ಮಾಡುವ ದ್ಯಾವಪ್ಪನ ಉದಾರ ಮನಸ್ಸು ಬಾಳವ್ವನ ಕಣ್ಣಾಲಿಗಳನ್ನು ತೇವಗೊಳಿಸುತ್ತವೆ. ದೂರವಿದ್ದರು ಒಬ್ಬರನ್ನೊಬ್ಬರು ಮನಸ್ಸಿನಲ್ಲೇ ಪ್ರೀತಿಸುತ್ತಾ ಹಳೆಯ ನೆನಪುಗಳೊಂದಿಗೆ ಜೀವನ ಸಾಗಿಸುವ ಬಾಳವ್ವನ ಪಾತ್ರವೂ ಕೂಡ ಮೌಲಿಕವಾಗಿ ಒಡಮೂಡಿವೆ. ಹೀಗೆ 'ತೇರು' ಕಾದಂಬರಿಯಲ್ಲಿ ಗುರುತಿಸಬಹುದಾದಂತಹ ಅನೇಕ ಮೌಲಿಕ ವಿಚಾರಗಳಿರುವುದು ಪಾಟೀಲರ ಉನ್ನತ ಬರವಣಿಗೆಗೆ ಸಾಕ್ಷಿಕರಿಸಿದಂತಿವೆ.

**ಉಪಸಂಹಾರ:**

ಹೀಗೆ, 'ತೇರು' ಕಾದಂಬರಿಯು ಊಳಿಗಮಾನ್ಯ ವ್ಯವಸ್ಥೆ, ಆಧುನಿಕ ಪ್ರಜಾತಂತ್ರ ವ್ಯವಸ್ಥೆ, ಪ್ರಭುತ್ವ ವ್ಯವಸ್ಥೆಯಲ್ಲಿ ಧಾರ್ಮಿಕ ಸಂಕಥನಗಳು ಅನೇಕ ತಲೆಮಾರುಗಳ ನಡುವೆ ಸಂಘರ್ಷಕ್ಕೀಡಾಗಿ ಹೇಗೆ ಬದಲಾವಣೆಯ ಮಹತ್ವವನ್ನು ಪಡೆದುಕೊಂಡಿವೆ ಎಂಬುದನ್ನು ಸ್ವಾರಸ್ಯಕರವಾಗಿ ನವ್ಯೋತ್ತರ ನೆಲೆಗಟ್ಟಿನಲ್ಲಿ ಬಂಡಾಯ ಮನೋಧರ್ಮದೊಂದಿಗೆ ರಚಿತಗೊಂಡಿದೆ. ಅದಕ್ಕಾಗಿ ಪಾಟೀಲರು 'ತೇರು' ಕಾದಂಬರಿಯ ಮೂಲಕ ಪರಂಪರಾಗತ ಅಮಾನವೀಯ ಕ್ರೌರ್ಯದ ಬೂಟಾಟಿಕೆಯ ಮೌಢ್ಯದ ವ್ಯವಸ್ಥೆಯನ್ನು ದಿಟ್ಟವಾಗಿ ಧಿಕ್ಕರಿಸಿ ಮಾನವೀಯ ಮೌಲ್ಯಗಳ ಪ್ರತಿಪಾದನೆಗೆ ಒತ್ತು ನೀಡಿ ಕಾದಂಬರಿಗೆ ಸಾರ್ಥಕತೆಯನ್ನು ತಂದುಕೊಟ್ಟಿದ್ದಾರೆ.

**ಆಕರ ಗ್ರಂಥ:**

1. ರಾಘವೇಂದ್ರ ಪಾಟೀಲ, (2003), ತೇರು, ಆನಂದಕಂದ ಗ್ರಂಥಮಾಲೆ, ಮಲ್ಲಾಡಹಳ್ಳಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.